# ವಿಧಿ–ನಿಷೇಧ

ನಾವು ಸಾಮಾನ್ಯವಾಗಿ 'ವಿಧಿ' ಎಂಬ ಮಾತನ್ನು ಹಲವು ಸಂದರ್ಭಗಳಲ್ಲಿ ಬಳಸುತ್ತೇವೆ. ಇದು ಕನ್ನಡದಲ್ಲಿ 'ಹಣೆ ಬರೆಹ' ಎಂಬ ಅರ್ಥದಲ್ಲಿಯೇ ಹೆಚ್ಚು ಬಳಕೆ! 'ವಿಧಿ ಪುದಿದ ಗದೆ ಕದನಂ' ಎಂಬ ಮಾತು ಕಾವ್ಯದಲ್ಲಿ ಬಂದಿದೆ. ಇದು ಭೀಮ–ದುರ್ಯೋಧನರ ಕಥನದ ಸಂದರ್ಭದಲ್ಲಿ ಕವಿಯೊಬ್ಬ ಬಳಸುವ ಮಾತು. ಇಲ್ಲಿ 'ದೈವ' ಎಂಬ ತಾತ್ಪರ್ಯಾರ್ಥದಲ್ಲಿಯೇ ಬಳಕೆಗೊಂಡಿದೆ. ಈ ಪದಕ್ಕೆ ಹಲವು ಅರ್ಥಗಳಿವೆ. ಅವುಗಳನ್ನು ಒಂದೊಂದಾಗಿ ಪರಿಶೀಲಿಸುವ ಪ್ರಯತ್ನ ಮಾಡೋಣ.

'ಬ್ರಹ್ಮ' ಎಂಬುದು ವಿಧಿಯೆಂಬ ಅರ್ಥದಲ್ಲಿ ಬಳಕೆಯುಂಟು. ತ್ರಿಮೂರ್ತಿಗಳಲ್ಲಿ ಬ್ರಹ್ಮನೂ ಒಬ್ಬ. ಅವನು ಸೃಷ್ಟಿಕರ್ತ. ಇಲ್ಲಿ ಸೃಷ್ಟಿಕರ್ತ ಎಂಬ ತಾತ್ಪರ್ಯಾರ್ಥದಲ್ಲಿ ಬಳಕೆಯಾಗಿದೆ. ಇನ್ನು ವಿಧಿ ಎಂಬುದಕ್ಕೆ 'ದೈವ' ಎಂಬ ಅರ್ಥದ ನೆಲೆಯೂ ಉಂಟು. ನಾವೆಲ್ಲರೂ ಆ ವಿಧಿಯ ಆಟದ ಬೊಂಬೆಗಳು. ಆ ವಿಧಿ (ದೈವ) ನಡೆಸಿದಂತೆ ಸಾಗಬೇಕೆಂದು ಸಾಮಾನ್ಯೀಕರಿಸುವುದುಂಟು. ಜನಪದ ಹಾಡುಗಳಲ್ಲಿಯೂ ಜನಪದ ಕಥನಗಳಲ್ಲಿಯೂ ಈ ಅರ್ಥದ ಬಳಕೆ ಬಂದಿದೆ. 'ರಾಜಾ ವಿಕ್ರಮಾದಿತ್ಯ' ನಾಟಕದಲ್ಲಿ ವಿಕ್ರಮನು ಶನಿಯ ಕೋಪಕ್ಕೊಳಗಾಗಿ ಕೈಕಾಲುಗಳನ್ನು ಕಳೆದುಕೊಳ್ಳುತ್ತಾನೆ. ಕೊನೆಗೆ ದೈವದ ಪ್ರಭಾವದಿಂದ ಮರಳಿ ಕೈಕಾಲುಗಳನ್ನು ಪಡೆಯುತ್ತಾನೆ. ಇಲ್ಲಿ 'ಶನಿ'ಯ ಆಟವನ್ನು ಗಮನಿಸಬಹುದು. ವಿಧಿ ಪದಕ್ಕೆ 'ಅದೃಷ್ಟ' ಎಂಬ ಅರ್ಥವೂ ಉಂಟು. ನಮ್ಮ ಬಾಳ್ವೆಯಲ್ಲಿ ಹಲವೊಮ್ಮೆ ಅದೃಷ್ಟದ ಆಟಗಳೂ ನಡೆಯುತ್ತವೆ. ಕಷ್ಟಕಾಲದಲ್ಲಿದ್ದಾಗ, ಯಾರೋ ಒಬ್ಬರು ನೆರವಾಗುವುದುಂಟಷ್ಟೆ. ಇದು ಹೇಳದೆ, ಕೇಳದೆ ಜೀವನದ ಕಡುಕಷ್ಟದ ಸಂದರ್ಭದಲ್ಲಿ ಬಂದೊದಗುವ ಅದೃಷ್ಟದ ಪರಿ! ವಿಧಿ ಎಂಬುದು 'ಅಪ್ಪಣೆ'. 'ಶಾಸನ', 'ಕಟ್ಟಳೆ' ಎಂಬ ಅರ್ಥದಲ್ಲಿ ಬಳಕೆಯುಂಟು! ಇವು ಪ್ರಾಚೀನ ಸ್ಮೃತಿಗ್ರಂಥಗಳಲ್ಲಿ ಈ ಅರ್ಥದಲ್ಲಿಯೇ ಬಳಕೆಯಲ್ಲಿವೆ. ಭಾರತೀಯ ಸಂವಿಧಾನದಲ್ಲಿ ಬಳಕೆಯಾಗಿರುವ ವಿಶಿಷ್ಟ ಪಾರಿಭಾಷಿಕ ಪದ 'ವಿಧಿ' ಎಂಬುದನ್ನು ಸ್ಮರಿಸಿಕೊಳ್ಳಬಹುದು.

ವಿಧಿ ಎಂಬ ಪದ ಪಡೆದಿರುವ ಇನ್ನೊಂದಿಷ್ಟು ಅರ್ಥದ ಆಯಾಮಗಳನ್ನು ನೋಡೋಣ. ರೀತಿ–ಭಾಗ್ಯ–ಕರ್ಮ ಎಂಬ ಅರ್ಥದಲ್ಲಿಯೂ ಇದು ಬಳಕೆಯಲ್ಲಿದೆ! ಪ್ರತಿಯೊಬ್ಬನ ಬದುಕಿನ ಕ್ರಮ, ರೀತಿ ಒಂದುಂಟಷ್ಟೆ. ಇದು ವಿಧಿಯ ಕ್ರಮ. ಅವನೊಬ್ಬ ಬಡವ, ಇವನೊಬ್ಬ ಶ್ರೀಮಂತ. ಇದೂ ಕೂಡ ವ್ಯಕ್ತಿಯೊಬ್ಬ ಪಡೆದುಕೊಂಡು ಬಂದ ಭಾಗ್ಯ. ವಿಧಿಯ ಕಟ್ಟಳೆಗಳಲ್ಲಿ ಭಾಗ್ಯವೊದಗಿ ಬರುವುದುಂಟು. ಭಾಗ್ಯ ಎಂದರೆ ಕೇವಲ ಸಂಪತ್ತೆಂದು ಅರ್ಥವಲ್ಲ. ಕಾಳಿದಾಸ 'ಭಾಗ್ಯಾಯತ್ತಃ' ಎನ್ನುತ್ತಾನೆ! ಪ್ರತಿಯೊಬ್ಬನ ಬದುಕಿನಲ್ಲಿಯೂ ಆಗಲೋ ಈಗಲೋ ಅನುಕೂಲವು ಒದಗಿ ಬರುವುದುಂಟು. ಇದು ಭಾಗ್ಯವಲ್ಲದೆ ಮತ್ತೇನು?

ವಿಧಿಗೂ ಕರ್ಮಮೀಮಾಂಸೆಗೂ ಸಂಬಂಧ ಉಂಟು! ದುರ್ಯೋಧನನು ಭೀಮನ ಗದಾಘಾತದಿಂದ ತೊಡೆ ಮುರಿದುಕೊಂಡು ಭೂಶಾಯಿ ಆಗುತ್ತಾನಷ್ಟೆ. ಇದು ಅವನ 'ಕರ್ಮ' ವಿಶೇಷ. ಕುವೆಂಪು 'ಕರ್ಮದ ಪಾಂಗು ಮರಿಗೆ ಮರಿ ಮರಿಗೆ ಮರಿ' ಎನ್ನುತ್ತಾರೆ. ಇದು 'ಬೆರಳ್‌ಗೆ ಕೊರಳ್' ನಾಟಕದಲ್ಲಿ ಬರುತ್ತದೆ. ಇನ್ನು 'ಧಾರ್ಮಿಕ ವಿಧಿ–ವಿಧಾನ'ಕ್ಕೂ ವಿಧಿ ಎಂದೇ ಕರೆಯುವುದುಂಟು! ಗೃಹಸ್ಥನೊಬ್ಬನ ಧಾರ್ಮಿಕ ರಿವಾಜುಗಳಿಗೂ ಸನ್ಯಾಸಿಯೊಬ್ಬನ ರೀತಿರಿವಾಜುಗಳನ್ನು ಬೇರೆಬೇರೆಯಾಗಿಯೇ ನೋಡಬೇಕು. ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ. ಈ ನಾಲ್ಕು ಆಶ್ರಮಗಳು ಧಾರ್ಮಿಕ ವಿಧಿ–ವಿಧಿ ವಿಧಾನಗಳು ಬೇರೆ ಬೇರೆಯೇ.

'ವಿಧಿ' ಎಂಬುದಕ್ಕೆ ನಡತೆ, ಸ್ಥಿತಿ, ಸೃಷ್ಟಿ, ವೇಳೆ, ವಿಜ್ಞಾನಿ, ವಿಷ್ಣು ಎಂಬ ಅರ್ಥದ ಪದರುಗಳೂ ಇವೆ. ಹೀಗೆ, ವಿಧಿ ಎಂಬುದು ಹಲವು ಪರಿಗಳಲ್ಲಿ ಹಲವು ಆಯಾಮಗಳಲ್ಲಿ ಬಳಕೆಯಾಗಿದೆ. ಕನ್ನಡ ಚಲನಚಿತ್ರದ ಒಂದು ಶೀರ್ಷಿಕೆಯೇ 'ವಿಧಿವಿಲಾಸ'. ಕಗ್ಗದ ಮೊದಲಲ್ಲಿ ಪ್ರೊ. ಟಿ.ಎಸ್. ವೆಂಕಣ್ಣಯ್ಯ ಮತ್ತು ಮೋಕ್ಷಗುಂಡಂ ಕೃಷ್ಣಮೂರ್ತಿ ಈ ಇಬ್ಬರು ಗೆಳೆಯರಿಗೆ ಮಂಕುತಿಮ್ಮ ಕಗ್ಗವನ್ನು ಅರ್ಪಿಸುತ್ತ ಹೇಳಿರುವ ಮಾತಿದು: 'ಬಿದಿ ಏಂ ಗೆಯ್ದಡೆಯುಂ ನಾನ್ ಅದಿರದೆ ನಿಲಲಾಯ್ತು ನಿಮ್ಮ ಕೆಳ ಆಸರೆಯಿಂ ಬದುಕನ್ ಅವನ್ ಒಡೆದೊಡೇನ್ ಎನ್ನ ಎದೆಯನ್ ಅವಂ ಕೀಳಲ್ ಅಳವೆ ನಿಮ್ಮ ಎಸೆ ನೆಳಲಂ!' — ಇದೊಂದು ಸುಂದರ ಕಂದಪದ್ಯ. ಇಲ್ಲಿ ಬಿದಿ (ವಿಧಿ) ಬಳಕೆಯಾಗಿದೆ. ದೈವ ಬ್ರಹ್ಮ ರೀತಿ ಎಂಬ ಅರ್ಥಗಳ ನೆಲಸು ಇಲ್ಲುಂಟು! 'ಆ ವಿಧಿಯು ಏನೇನು ಮಾಡಿದರೂ ನಾನು ಹೆದರದೆ ನಿಲ್ಲಲು ಸಾಧ್ಯವಾದದ್ದು ನಿಮ್ಮ ಸ್ನೇಹದ ಆಸರೆಯಿಂದ. ನಮ್ಮ ಸ್ನೇಹದ ಬದುಕನ್ನು ಅವನು (ವಿಧಿ) ಕಿತ್ತುಕೊಂಡ. ಆದರೆ, ನನ್ನ ಹೃದಯದಲ್ಲಿ ನೆಲೆ ನಿಂತಿರುವ ನಿಮ್ಮ ತಂಪಾದ ಸ್ನೇಹವನ್ನು ಕೀಳಲು ಸಾಧ್ಯವೇ?'.

'ನಿಷೇಧ' ಎಂಬ ಪದದ ನೆಲಸನ್ನು ಈಗ ತಿಳಿಯುವ ಯತ್ನವನ್ನು ಮಾಡೋಣ. ವಿಧಿ ಎಂಬ ಪದ ಪ್ರಯೋಗ ಬಂದಾಗ 'ನಿಷೇಧ' ಎಂಬ ಪದ ತಕ್ಷಣವೇ ಉತ್ತರಭಾಗದಲ್ಲಿ ಬಂದು ನೆಲೆನಿಲ್ಲುವುದುಂಟು. ಇದಕ್ಕೂ ಹಲವು ಅರ್ಥದ ಪದರುಗಳುಂಟು. ಅಲ್ಲವೆಂದು ಹೇಳುವಿಕೆ, ನಿರಾಕರಣೆ, ಪ್ರತಿರೋಧ, ಅಡ್ಡಿ, ತಡೆ, ಬಹಿಷ್ಕಾರ, ಹೊರಗೆ ಹಾಕುವಿಕೆ ಎಂದಿದೆ. ನಿಷೇಧ ಎಂಬುದು ಸಾಮಾನ್ಯವಾಗಿ ಶಾಸ್ತ್ರಗ್ರಂಥಗಳಲ್ಲಿ ಹೆಚ್ಚು ಬಳಕೆಯಾಗಿದೆ. ವಿಶೇಷವಾಗಿ ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವಮೀಮಾಂಸಾ, ಉತ್ತರ ಮೀಮಾಂಸಾ ಎಂಬ ಪ್ರಾಚೀನ ಆರು ದರ್ಶನಗಳಲ್ಲಿ ನಿರಾಕರಣೆಯೆಂದೋ ವಿರೋಧವೆಂದೋ ಅರ್ಥದ ನೆಲೆಯಲ್ಲಿಯೇ ಬಂದಿರುವುದುಂಟು.

ಧಾರ್ಮಿಕ ಆಚರಣೆಯಲ್ಲಿಯೋ ಮತದ ಬಳಕೆಯಲ್ಲಿಯೋ ಹಲವು ತೆರನಾದ ನಿಷೇಧಗಳುಂಟು. ಗಂಡಸರಿಗೆ ಒಪ್ಪಿತವಾಗುವ ಕರ್ಮಗಳು; ಹೆಂಗಸರಿಗೆ ನಿಷೇಧವಾಗಿ ಬರುವುದುಂಟು. ಅದರಂತೆ ಹೆಂಗಸರಿಗೆ ಒಪ್ಪಿತವಾಗುವ ಕ್ರಿಯೆಗಳು ಗಂಡಸರಿಗೆ ನಿಷೇಧವಾಗಿ ಬರುವುದುಂಟು! ಇಲ್ಲಿ ಗಂಡು–ಹೆಣ್ಣು ಎಂಬುದು ಆಂಶಿಕ ಭೇದ ಮಾತ್ರ. ನಾವೀಗ ಆಧುನಿಕ ಯುಗದಲ್ಲಿ ನೆಲೆ ನಿಂತಿದ್ದೇವೆ. ಭೌತಿಕವಾಗಿ, ಧಾರ್ಮಿಕವಾಗಿ, ಹೆಣ್ಣಾಗಲಿ, ಗಂಡಾಗಲಿ ವಿಧಿ ನಿಷೇಧಗಳ ಆಚೆಗೆ ಬಂದು ನಿಂತುಬಿಟ್ಟಿದ್ದಾರೆ. ಒಂದು ಕಾಲಕ್ಕೆ ಶಾಸ್ತ್ರವು ವಿಧಿಯನ್ನು ಹೇಳಿದರೆ; ಮತ್ತೊಂದು ಕಾಲಕ್ಕೆ ನಿಷೇಧ ಹೇಳುವುದುಂಟು. ಅದಕ್ಕಾಗಿಯೇ 'ಕೋ ವಿಧಿಃ ಕೋ ನಿಷೇಧಃ?' ಎಂಬ ಮಾತು ಪ್ರಾಚೀನ ಕಾಲದಲ್ಲಿಯೇ ಬಳಕೆಗೆ ಬಂತು. ಆಚಾರ್ಯ ಮಧ್ವರ ಅಭಿಪ್ರಾಯವನ್ನು ವ್ಯಾಖ್ಯಾನಿಸುತ್ತ ಬನ್ನಂಜೆ ಗೋವಿಂದಾಚಾರ್ಯರು 'ಒಂದೇ ವಿಧಿ, ಒಂದೇ ನಿಷೇಧ. ಮತ್ತೆಲ್ಲ ಸುಮ್ನೆ. ಭಗವಂತನನ್ನು ಸ್ಮರಿಸಬೇಕು ಇದು ವಿಧಿ. ಭಗವಂತನನ್ನು ಮರೆಯಬಾರದು ಇದು ನಿಷೇಧ. ಇದಿಷ್ಟೇ. ಉಳಿದ ವಿಧಿ–ನಿಷೇಧಗಳೆಲ್ಲ ಇದಕ್ಕೆ ಪೂರಕವಾಗಿ ಬಂದಿರುವ ಬಾಲಂಗೋಚಿಗಳು ಮಾತ್ರ!' ಎಂಬ ಮಾತನ್ನು ಹೇಳಿದ್ದಾರೆ.

ವಿಧಿ–ನಿಷೇಧಗಳು ಲೌಕಿಕ ನೆಲೆಯಲ್ಲಿರುವ ಕಟ್ಟುಕಟ್ಟಳೆಗಳು ಮಾತ್ರ. ಇವು ಕಾಲಕಾಲಕ್ಕೆ ಬದಲಾಗಬಹುದು; ಮುರಿದು ಬೀಳಬಹುದು. ಆಧ್ಯಾತ್ಮಿಕ ನೆಲೆಯಲ್ಲಿ ಮಾತ್ರ ದೈವದ ನೆಲೆಗೆ ವಿಧಿಯಾದರೆ; ದೈವವನ್ನು ಮರೆಯದಂತೆ ಇರುವುದೇ ನಿಷೇಧವಾಗಿ ಬಿಡುತ್ತದೆ. ವಿಧಿ–ನಿಷೇಧಗಳು ಪೂರ್ವಪಶ್ಚಿಮಗಳಲ್ಲ, ಉತ್ತರ ದಕ್ಷಿಣಗಳೂ ಅಲ್ಲ. ಅವು ಒಂದರೊಡನೆ ಒಂದು ಹೊಂದಿಕೊಂಡಿರುವ ಜ್ಞಾನಫಲಗಳು.

■ **ಪುರಂಜೀವಿ**

## ಮಾತೇ ಮುತ್ತು

- ಯಶಸ್ಸನ್ನು ಸಂಭ್ರಮಿಸಿ. ಆದರೆ ವಿಫಲತೆಯಿಂದ ಪಾಠ ಕಲಿಯುವುದನ್ನು ಮರೆಯಬೇಡಿ.
  —ಬಿಲ್ ಗೇಟ್ಸ್
- ನೀವೂ ಶಾಂತಿಯನ್ನು ಬಯಸುವುದಾದರೆ, ಮತ್ತೊಬ್ಬರಿಗೂ ಶಾಂತಿಯನ್ನು ನೀಡಬೇಕು.
  —ದಲೈಲಾಮ
- ನಮ್ಮ ನಿಜವಾದ ಶತ್ರು ಯಾವುದೇ ಬಾಹ್ಯ ಶಕ್ತಿ ಅಲ್ಲ. ನಮ್ಮೊಳಗಿನ ದೌರ್ಬಲ್ಯ ಹೇಡಿತನ, ಸ್ವಾರ್ಥ, ಬೂಟಾಟಿಕೆಗಳೇ ನಮ್ಮ ಶತ್ರುಗಳು.
  —ಅರವಿಂದ ಘೋಷ್